



# ಮೀಸೆ ಟ್ಯಾಮ!



ಈತ ಬಿಳಿಮೀಸೆಯ ಹನುಮಂತು! ವಿಶ್ವದಾದ್ಯಂತ ಇರುವ 264 ಕೋತಿ ತಳಿಗಳಲ್ಲಿ ತನ್ನ ಮೀಸೆಯ ಮೂಲಕವೇ ಹೆಚ್ಚು ಗಮನ ಸೆಳೆಯುತ್ತಿರುವ ಕೋತಿ ಇದು. ಎಂಪರರ್ ಟ್ಯಾಮರಿನ್ ಎಂಬ ಹೆಸರಿನ ಈ ಕೋತಿಯ ಬಾಲವೂ ಹದಿಮೂರೂವರೆ ಇಂಚು ಉದ್ದವಿರುತ್ತದೆ. ಸಾಮಾನ್ಯವಾಗಿ ನೈಋತ್ಯ ಅಮೆಜಾನ್ ತೀರಗಳಲ್ಲಿ ಈ ಕೋತಿ ಕಾಣಸಿಗುತ್ತದೆ. ಇದರ ಗಿರಿಜಾ ಮೀಸೆಯನ್ನು ನೋಡಿಯೇ ಇದಕ್ಕೆ 'ಎಂಪರರ್' (ಚಕ್ರವರ್ತಿ) ಎಂಬ ಹೆಸರು ಬಂದಿರಬೇಕು!

ಕೋತಿಗಳಲ್ಲಿ ಇರುವ ಅಷ್ಟೂ ವೈವಿಧ್ಯಗಳು ಕುತೂಹಲಕಾರಿ. ಅತ್ಯಂತ ಸಣ್ಣ ಕೋತಿ ಎಂದರೆ ಪಿಗ್ಮಿ ಮರ್ಮಸೆಟ್. ಅತ್ಯಂತ ದೊಡ್ಡದೆಂದರೆ ಮಾಂಡ್ರಿಲ್. ಮಧ್ಯಮ ಗಾತ್ರದ ಎಂಪರರ್ ಟ್ಯಾಮರಿನ್ ಪೆರು, ಬೊಲಿವಿಯಾ, ಬ್ರೆಝಿಲ್ ದೇಶಗಳ ಕಾಡಿನಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಿದೆ. ಇತ್ತೀಚೆಗೆ ಇವುಗಳ ಸಂತತಿ ಕ್ಷೀಣಿಸುತ್ತಿದೆ ಎನ್ನುವ ವರದಿಗಳೂ ಇವೆ.

■ ವಸಂತ ಮಾಲವಿ